ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಚಿಕ್ಕಮಗಳೂರು

ಸಿ.ಸಿ.ನಂ. 44 :2018

| | | | |
|---|---|---|---|
| ಸಾಕ್ಷಿದಾರರ ಹೆಸರು | : ಹೆಚ್ ಜಿ ಮಹೇಶ್ | ಪಿ.ಡಬ್ಲ್ಯೂ: 12 |
| ತಂದೆಯ ಹೆಸರು | : ಗಿರಿಗೌಡ | ಸಿ.ಡಬ್ಲ್ಯೂ: 29 |
| ವಯಸ್ಸು | : 61 ವರ್ಷ | |
| ವೃತ್ತಿ | : ನಿವೃತ್ತ ಪಿ ಐ | |
| ವಾಸ | : ಅರಸೀಕೆರೆ | |

ದಿನಾಂಕ: 21-01-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಕಲಂ 299 ರ ಪ್ರಕಾರ ಮುಖ್ಯ ವಿಚಾರಣೆ: ಹಿರಿಯ ಎಪಿಪಿ ರವರಿಂದ:-

ನಾನು ದಿ: 1.10.2005 ರಿಂದ 18.6.2006 ರವರೆಗೆ ಚಿಕ್ಕಮಗಳೂರಿನ ನಗರ ಪೋಲಿಸ್ ಠಾಣೆಯಲ್ಲಿ ಪಿಎಸ್ಐ ಕರ್ತವ್ಯ ಮಾಡುತ್ತಿದ್ದೇನೆ.

ದಿ: 17.05.2006 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ರಾತ್ರಿ 11.00 ಗಂಟೆ ಸಮಯದಲ್ಲಿ ಡಿಸಿಐಬಿ ಇನ್ಸಪೆಕ್ಟರ್ ಚಾಸಾ-1 ರವರು ಒಂದು ಗಣಕೀಕೃತ ದೂರು ನೀಡಿದ್ದು ನಾನು ಅದನ್ನು ಸ್ವೀಕರಿಸಿ ಮೊಕದ್ದಮೆ ಸಂಖ್ಯೆ 222: 2006 ರಲ್ಲಿ ಪ್ರಕರಣ ದಾಖಲಿಸಿ ಪ್ರವ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ರವಾನಿಸಿರುತ್ತೇನೆ. ನಾನು ಪಡೆದ ದೂರನ್ನು ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸಿದ್ದೇನೆ. ದೂರನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ-2(ಬಿ) ಅಂತ ಗುರುತಿಸಲಾಯಿತು. ನಾನು ನ್ಯಾಯಾಲಯಕ್ಕೆ ಕಳುಹಿಸಿದ ಪ್ರವ ವರದಿಯನ್ನು ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸಿದ್ದೇನೆ. ಪ್ರವವ ವನ್ನು ನಿಪಿ-19 ಎಂದು ಸಾಕ್ಷಿ ಸಹಿಯನ್ನು ನಿಪಿ-19(ಎ) ಅಂತ ಗುರುತಿಸಲಾಯಿತು. ಮುಂದಿನ ತನಿಖೆಯನ್ನು ಚಾಸಾ-30 ರವರಿಗೆ ವಹಿಸಿಕೊಟ್ಟಿದ್ದೇನೆ.

ಪಾಟೀ ಸವಾಲು : ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ. ಚಿಕ್ಕಮಗಳೂರು.